ನಿಯಮ ೬೬ಳರ ಮೇರೆಗೆ.

ವಿಷಯ:- (೧) ಬಿರಾದ್ ತಾಲ್ಲೂಕಿನ ಎಂ.ಡೋಣಗಾಂವ್ ಗ್ರಾಮದಲ್ಲಿ ಎನ್.ಆರ್. ಡಬ್ಲ್ಯು. ನೀರು ಸರಬರಾಜು ಅವ್ಯವಸ್ಥೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬಿರಾದ್):- ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯ ಬಿರಾದ್ ತಾಲ್ಲೂಕಿನ ಎಂ. ಡೋಣಗಾಂವ್ ಗ್ರಾಮದಲ್ಲಿ ಎನ್.ಆರ್. ಡಬ್ಲ್ಯು. ನೀರು ಸರಬರಾಜು ಯೋಜನೆಯಲ್ಲಿ ಸ್ಥಾಪಿಸಲಾಗಿರುವ ನಲ್ಲಿ ನೀರಿನ ವ್ಯವಸ್ಥೆ ವಿದ್ಯುತ್ ಮೋಟಾರು ಸುಟ್ಟು ಹೋಗಿರುವುದರಿಂದ ಕಳೆದ ೮ ತಿಂಗಳಿನಿಂದ ಗ್ರಾಮಕ್ಕೆ ನೀರು ಸರಬರಾಜು ಸ್ಥಗಿತಗೊಂಡಿದೆ. ಇಲ್ಲಿನ ಗ್ರಾಮಸ್ಥರು ನೀರು ತರಲು ಸುಮಾರು ೧ ಕಿಲೋಮೀಟರ್ ದೂರಕ್ಕೆ ಹೋಗಬೇಕಾಗಿದೆ. ಆದ್ದರಿಂದ ಕೆಟ್ಟಿರುವ ವಿದ್ಯುತ್ ಮೋಟಾರನ್ನು ದುರಸ್ಥಿಪಡಿಸಿ ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವುದರಿಂದ ಈಗ ಇರುವ ನೀರು ಸರಬರಾಜ್‌ನ ಯೋಜನೆಯ ಜೊತೆಗೆ ಇನ್ನೂ ಎರಡು ಕೊಳವೆ ಬಾವಿಗಳನ್ನು ತೋಡಿಸಲು ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರನ್ನು ವಿನಂತಿಸಿಕೊಳ್ಳುತ್ತೇನೆ.

೧೭೨೭೯೩

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿರಾಜ್ ಸಚಿವರ ಪರವಾಗಿ):- ಸನ್ಮಾನ್ಯ ಅಧ್ಯಕ್ಷರೆ "ಬಿರಾದ್" ತಾಲ್ಲೂಕಿನ ಡೋಣಗಾಂವ ಗ್ರಾಮದ ನೀರು ಸರಬರಾಜು ಯೋಜನೆಯು ೧೯೭೮-೭೯ರಲ್ಲಿ ಪೂರ್ಣಗೊಂಡಿದ್ದು, ಒಂದು ತೆರೆದ ಬಾವಿಯ ಜಲ ಮೂಲವಾಗಿದ್ದು, ನೀರನ್ನು, ೩೫೦೦ ಲೀಟರ್ ಗಾತ್ರದ ಒಂದು ನೆಲಸಮ ಜಲಾಶಯದ ಮೂಲಕ ಹಾಗೂ ೧೨ ಸ್ಟ್ಯಾಂಡ್ ಪಂಪುಗಳ ಮೂಲಕ,ಸರಬರಾಜು ಮಾಡಲಾಗುತ್ತಿದೆ. ಇದಲ್ಲದೆ ಮೂರು ಕೈಪಂಪಿನ ಕೊಳವೆ ಬಾವಿಗಳು ಗ್ರಾಮದಲ್ಲಿರುತ್ತದೆ. ಈ ಯೋಜನೆಯು ಮಂಡಲ ಪಂಚಾಯಿತಿಯ ವತಿಯಿಂದ ನಿರ್ವಹಿಸಲ್ಪಡುತ್ತಿದೆ. ಸಬ್‌ಮರ್ಸಿಬಲ್ ಪಂಪುಗಳು ಕಳೆದ ಎರಡು ತಿಂಗಳುಗಳಿಂದ ಕೆಟ್ಟುಹೋಗಿದೆ ಎಂದು ತಿಳಿದುಬಂದಿದೆ. ಈಗ ಅವುಗಳನ್ನು ದುರಸ್ಥಿ ಮಾಡಲಾಗಿದೆ ಮತ್ತು ಇನ್ನು ಮೂರ್ನಾಲ್ಕು ದಿನಗಳಲ್ಲಿ ನೀರನ್ನು ಸರಬರಾಜು ಮಾಡಲಾಗುವುದೆಂದು ತಿಳಿದುಬಂದಿದೆ. ಗ್ರಾಮದಲ್ಲಿ ಹಾಲಿ ೨೪೦೦ ಜನಸಂಖ್ಯೆ ಇದ್ದು, ನೀರು ಸರಬರಾಜಿನ ಪುನಃಶ್ಚೇತನ ಕಾರ್ಯವನ್ನು ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ೧೯೭೯-೮೦ನೇ ಸಾಲಿನ ಅಪೆಂಡೆಕ್ಸ್ 'ಇ' ನಲ್ಲಿ ಸೇರಿಸಿದ್ದು, ಈ ವರ್ಷ ೬೦ ಸಾವಿರ ರೂಪಾಯಿಗಳ ಅನುದಾನವನ್ನು ಕೊಡಲಾಗಿದೆ. ಈ ಕೆಲಸವನ್ನು ಆದಷ್ಟು ಬೇಗ ತೆಗೆದುಕೊಳ್ಳಲಾಗುವುದು. ಮತ್ತು ೫೦ ಸಾವಿರ ಲೀಟರ್ ಗಾತ್ರದ ನೀರಿನ ಟ್ಯಾಂಕ್ ಮತ್ತು ಪೈಪ್ ಲೈನ್‌ನ ವಿಸ್ತರಣೆಯ ಕೆಲಸಕ್ಕೆ ಅನುಮತಿಯನ್ನು ಪಡೆಯಲಾಗಿದೆ. ಮತ್ತು ಆ ಕೆಲಸವನ್ನು ತೆಗೆದುಕೊಳ್ಳಲಾಗುತ್ತದೆ.

ವಿಷಯ (೨):- ಶ್ರವಣಬೆಳಗೊಳದಲ್ಲಿ ನಡೆಯಲಿರುವ ಮಹಾ ಮಸ್ತಕಾಭಿಷೇಕದ ಕಾರ್ಯಕ್ರಮಗಳು.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೇನರಸಿಪುರ):- ಮಾನ್ಯ ಅಧ್ಯಕ್ಷರೇ, ಈ ವರ್ಷ ಶ್ರವಣಬೆಳಗೊಳದಲ್ಲಿ ಬಾಹುಬಲಿಗೆ ಮಹಾ ಮಸ್ತಕಾಭಿಷೇಕ ನಡೆಯಲಿದ್ದು, ಲಕ್ಷಾಂತರ ಜನ ಭಕ್ತಾದಿಗಳು ಹಾಗೂ ಪ್ರವಾಸಿಗರು ಬರುವ ನಿರೀಕ್ಷೆ ಇರುವುದರಿಂದ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿದೆ. ಶ್ರವಣಬೆಳಗೊಳದಲ್ಲಿ ಹಾಗೂ ಹಾಸನದಲ್ಲಿ ಉತ್ತಮ ದರ್ಜೆಯ ಹೋಟೆಲ್‌ಗಳು, ಯಾತ್ರಿನಿವಾಸಗಳು ನಿರ್ಮಾಣವಾಗಬೇಕಾಗಿದೆ. ದೇಶದಲ್ಲಿರುವ ಎಲ್ಲಾ ಜೈನ್ ಪಂಗಡಗಳವರಿಗೂ ಈ ಸಮಾರಂಭದ ಬಗ್ಗೆ ತಿಳುವಳಿಕೆ ನೀಡಬೇಕಾಗಿದೆ. ಈ ಸಂದರ್ಭದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ವಿಶೇಷ ಕಾರ್ಯಕ್ರಮಗಳನ್ನು

ರೂಪಿಸಿಕೊಳ್ಳಬೇಕಾಗಿದೆ. ಬೇಲೂರು, ಹಳೇಬೀಡುಗಳಲ್ಲಿಯೂ ಸಹಾ ಹೆಚ್ಚಿನ ಸೌಕರ್ಯವನ್ನು ಪ್ರವಾಸಿಗಳಿಗೆ ಒದಗಿಸಲು ಕ್ರಮ ಕೈಗೊಳ್ಳಬೇಕಾಗಿದೆ. ಬೇಲೂರಿನಲ್ಲಿ ಒಂದು ಮನರಂಜನ ಸಂಕೀರ್ಣವನ್ನು ನಿರ್ಮಿಸಲು ಪರಿಶೀಲನೆ ಮಾಡಬೇಕು. ಪ್ರವಾಸೋದ್ಯಮ ಇಲಾಖೆಯವರು ಶ್ರವಣಬೆಳಗೊಳ, ಬೇಲೂರು, ಹಳೇಬೀಡನ್ನು ಅಭಿವೃದ್ಧಿಗೊಳಿಸಲು ವಿಶೇಷ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಹಾಗೂ ಶ್ರವಣಬೆಳಗೊಳದಲ್ಲಿ ನಡೆಯುವ ಮಹಾಮಸ್ತಕಾಭಿಷೇಕಕ್ಕೆ ಬರತಕ್ಕ ಪ್ರವಾಸಿಗರಿಗೆ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಡಲು ಕೈಗೊಂಡ ಕ್ರಮಗಳ ಬಗ್ಗೆ ಸನ್ಮಾನ್ಯ ಪ್ರವಾಸೋದ್ಯಮ ಸಚಿವರು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಪೆರಿಕಲ್ ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯಮಂತ್ರಿ):- ಮಾನ್ಯ ಅಧ್ಯಕ್ಷರೇ, ಈ ಸಂಬಂಧವಾಗಿ ನನ್ನ ಹೇಳಿಕೆಯನ್ನು ಓದುತ್ತೇನೆ. ಶ್ರವಣಬೆಳಗೊಳದ ರಾಜ್ಯದ ಪ್ರಮುಖ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದು. ಇಲ್ಲಿರುವ ೫೭ ಅಡಿ ಎತ್ತರದ ಏಕ ಶಿಲೆಯ ಗೊಮ್ಮಟೇಶ್ವರ ವಿಗ್ರಹವನ್ನು ಕ್ರಿ.ಶ.೯೮೧ರಲ್ಲಿ ಸ್ಥಾಪಿಸಲಾಗಿದೆ. ದೇಶದ ಅತ್ಯಂತ ಎತ್ತರದ ಏಕ ಶಿಲಾ ವಿಗ್ರಹ ಇದಾಗಿದ್ದು ಜೈನರ ಪವಿತ್ರ ಯಾತ್ರಾ ಸ್ಥಳ ಎನಿಸಿದೆ. ಪ್ರತಿ ೧೨ ವರ್ಷಕ್ಕೊಮ್ಮೆ ಆಚರಿಸಲಾಗುವ ಮಹಾಮಸ್ತಕಾಭಿಷೇಕವನ್ನು ಈ ಭಾರಿ ೧೯೯೩ರ ಕೊನೆಯಲ್ಲಿ ಆಚರಿಸಲು ಸಿದ್ಧತೆಗಳು ಸಾಗಿವೆ.

ಈ ವರ್ಷದಲ್ಲಿ ಮಹಾಮಸ್ತಕಾಭಿಷೇಕ ಬಹು ವಿಜೃಂಭಣೆಯಿಂದ ನಡೆಸಲು ಉದ್ದೇಶಿಸಿ ಇದನ್ನು ಕಾರ್ಯಗತಗೊಳಿಸಲು ರಾಜ್ಯ ಮಟ್ಟದಲ್ಲಿ ಕಂದಾಯ ಇಲಾಖೆಯ ಅಡಿಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಈಗಾಗಲೇ ಹಲವಾರು ಭಾರಿ ಸೇರಿ ಪ್ರವಾಸಿಗಳ ಅನುಕೂಲಕ್ಕಾಗಿ ಮತ್ತು ಮಹಾಮಸ್ತಕಾಭಿಷೇಕ ಮಹೋತ್ಸವವನ್ನು ನೆರವೇರಿಸಲು ಹಲವಾರು ಕಾರ್ಯಗಳನ್ನು ಹಮ್ಮಿಕೊಂಡು ಎಲ್ಲಾ ಸಂಬಂಧಪಟ್ಟ ಇಲಾಖೆಗಳಲ್ಲಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಈ ಸೂಚನೆಯನ್ನು ಪ್ರವಾಸೋದ್ಯಮ ಸಚಿವರ ಹೇಳಿಕೆಗಾಗಿ ಗಮನ ಸೆಳೆದಿರುವುದರಿಂದ ಪ್ರವಾಸೋದ್ಯಮ ಇಲಾಖಾವತಿಯಿಂದ ಪ್ರವಾಸಿಗರ ಅನುಕೂಲಕ್ಕಾಗಿ, ಈ ಕೆಳಗೆ ಕಾಣಿಸಿದ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಮಹಾಮಸ್ತಕಾಭಿಷೇಕದ ನಿಮಿತ್ತ ಶ್ರವಣಬೆಳಗೊಳದಲ್ಲಿ ಪ್ರವಾಸಿ ಸೌಲಭ್ಯ ನಿರ್ಮಿಸಲು ಪ್ರವಾಸೋದ್ಯಮ ಇಲಾಖೆ ಉದ್ದೇಶಿಸಿದೆ. ಶ್ರವಣಬೆಳಗೊಳದಲ್ಲಿ ಎರಡು ಸುಲಭ ಶೌಚಾಲಯ, ಬೇಲೂರು- ಹಳೇಬೀಡಿನಲ್ಲಿ ತಲಾ ಒಂದು ಶೌಚಾಲಯ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಈಗಾಗಲೇ, ೧೬.೦೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿ ಮೊದಲನೇ ಕಂತಾಗಿ ೧೨ ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದೆ. ಇದಲ್ಲದೆ, ಶ್ರವಣಬೆಳಗೊಳದಲ್ಲಿ ಯಾತ್ರಿನಿವಾಸ ನಿರ್ಮಿಸಲು ಕೇಂದ್ರ ಸರ್ಕಾರ ೬೯.೬ ಲಕ್ಷ ರೂ.ಗಳನ್ನು ಇತ್ತೀಚೆಗೆ ಮಂಜೂರು ಮಾಡಿ ಮೊದಲನೇ ಕಂತಾಗಿ ೨೦.೦೦ ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದೆ. ಈ ಮಹಾಮಸ್ತಕಾಭಿಷೇಕದ ಪ್ರಚಾರ ಕಾರ್ಯಕ್ಕಾಗಿ ೨೦.೦೦ ಲಕ್ಷ ರೂ.ಗಳನ್ನು ನೀಡಲು ಕೇಂದ್ರ ಸರ್ಕಾರ ತತ್ವಶಃ ಒಪ್ಪಿದೆ.

ಈಗಾಗಲೇ ಎಲ್ಲಾ ಕಾರ್ಯಗಳನ್ನು ಕಂದಾಯ ಇಲಾಖೆಯ ಮೂಲಕ ನಡೆಸಲಾಗುತ್ತಿದೆ.

ವಿಷಯ:- ಉಳ್ಳಾಲ ಪ್ರದೇಶದ ಕರಾವಳಿಯಲ್ಲಿ ಸಮುದ್ರ ಕೊರತೆಯಿಂದ ಹಾನಿ.

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):- ಮಾನ್ಯ ಅಧ್ಯಕ್ಷರೇ, ಮಂಗಳೂರು ತಾಲ್ಲೂಕು ಉಳ್ಳಾಲ ಪ್ರದೇಶದ ಕರಾವಳಿಯಲ್ಲಿ ಸಮುದ್ರ ಕೊರೆತದಿಂದ ಭಾರಿ ಹಾನಿಯಾಗಿದೆ. ಅದೇ ರೀತಿ, ಬೆಂಗ್ರೆ ಪ್ರದೇಶ ಕೂಡ. ಇದನ್ನು ತಡೆಗಟ್ಟಲು ಆಳವೆಬಾಗಿಲಿನ ದಕ್ಷಿಣ ಮತ್ತು ಉತ್ತರ ಭಾಗದಲ್ಲಿ ' ಬ್ರೇಕ್ ವಾಟರ್' ಕೆಲಸ ಪ್ರಾರಂಭವಾಗಿ ಎರಡು ವರ್ಷವಾದರೂ ಕೆಲಸ ಭಾರಿ ಮಂದಗತಿಯಲ್ಲಿದೆ. ದಕ್ಷಿಣ ಭಾಗದಲ್ಲಿ ಕೆಲಸ ನಿಧಾನವಾಗಿ ಸಾಗುತ್ತಿದೆ. ಉತ್ತರ ಭಾಗದಲ್ಲಿ ಗುತ್ತಿಗೆಗೆ ಕೊಡಲಾಗಿದೆ. ಕೆಲಸ ಸುಸೂತ್ರವಾಗಿ ನಡೆಯುತ್ತಿಲ್ಲ. ಈ ಕೆಲಸ ತುರ್ತಾಗಿ ಆಗದೆ